# ಪಕ್ಷಿ ಕಾಶಿ

## ಭಾರತ ಈಗಲೂ ಪಕ್ಷಿಕಾಶಿಯೆ?

■ ಎಸ್. ಶಿಶುಪಾಲ
ಲೇಖಕರು ಪಕ್ಷಿ ತಜ್ಞರು ಮತ್ತು ಪ್ರಾಧ್ಯಾಪಕರು, ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ

ಭಾರತದ ಪರಿಸರ ಸಮೃದ್ಧಿ ಹಾಗೂ ಜೀವವೈವಿಧ್ಯಕ್ಕೆ ಹೆಸರಾದುದು. ಬಾನಾಡಿಗಳ ಪಾಲಿಗಂತೂ ಭಾರತ 'ಪಕ್ಷಿಕಾಶಿ'. ಸಾವಿರಾರು ಮೈಲಿಗಳ ದೂರದಿಂದ ಹಿತಕರ ವಾತಾವರಣ ಹುಡುಕಿಕೊಂಡು ಬರುವ ವಲಸೆ ಹಕ್ಕಿಗಳಿಗೂ ಭಾರತ ಅಚ್ಚುಮೆಚ್ಚು. ಆದರೆ, ಇದೆಲ್ಲ ಹಿರಿಮೆ ಈಗಲೂ ಉಳಿದುಕೊಂಡಿದೆಯೆ? ಏರುತ್ತಿರುವ ತಾಪಮಾನ, ಅರಣ್ಯಗಳ ಸವಕಳಿ, ಪರಿಸರ ಮಾಲಿನ್ಯ, ಮನುಷ್ಯನ ಬಕಾಸುರ ಬಯಕೆಗಳು – ಇವೆಲ್ಲವೂ ಪಕ್ಷಿಲೋಕದ ಮೇಲೆ ಬೀರಿರುವ ಪರಿಣಾಮಗಳೇನು? 'ಭಾರತದ ಪಕ್ಷಿಗಳ ಸ್ಥಿತಿ–ಗತಿ 2023' ವರದಿ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಆ ವರದಿ, ಪಕ್ಷಿಗಳ ಆರೋಗ್ಯದ ಬಗ್ಗೆ ದಾಖಲಿಸಿರುವ ಅಂಕಿಅಂಶಗಳು, ದೇಶದ ಪ್ರಾಕೃತಿಕ ಆರೋಗ್ಯ ಹಾಗೂ ನಾಗರಿಕರ ಆರೋಗ್ಯಭಾಗ್ಯದ ಸಾಧ್ಯತೆಗಳತ್ತಲೂ ಗಮನಸೆಳೆಯುವಂತಿವೆ. ಪಕ್ಷಿಲೋಕಕ್ಕೆ ಸಂಬಂಧಿಸಿದ ಈ ವಿಸ್ತೃತ ವಿಶ್ಲೇಷಣೆ, 'ಸುಧಾ'ದಲ್ಲಿ ಮಾತ್ರ.